

ಮಕ್ಕಳ ಉಡುಪುಗಳಲ್ಲಿ ಗೊಂಬೆ, ಪ್ರಾಣಿ ಪಕ್ಷಿಗಳ ಚಿತ್ರ ಚಿತ್ತಾರವಿದ್ದರೆ ಮಕ್ಕಳಿಗೆ ಖುಷಿಯೋ ಖುಷಿ. ದಸರಾ ಹಬ್ಬದ ಸಂದರ್ಭದಲ್ಲಿ ಮಕ್ಕಳ ಫ್ರಾಕ್, ಬಾರ್ಬಿ ಗರ್ಲ್, ಫ್ರೋಜನ್ ಎಲ್ಸಾ ಮುಂತಾದವು ಫ್ಯಾಷನ್ ಟ್ರೆಂಡ್ ಆಗಿವೆ. ಈ ಟ್ರೆಂಡಿಂಗ್ ಉಡುಪುಗಳು ಮಕ್ಕಳಿಗೂ ಮುದ್ದು, ನೋಡುವವರಿಗೂ ಮುದ್ದು.

# ಮಕ್ಕಳುಡುಗೆಯು ಚಂದ

■ ಸುಮಾ ಬಿ.

ಮೂರು ವರ್ಷದ ತನ್ನ ಮಗನಿಗೆ ನಿತ್ಯ ಸ್ನಾನ ಮಾಡಿಸಿ ಬಟ್ಟೆ ಹಾಕುವಷ್ಟರಲ್ಲಿ ರೀನಾ ಸುಸ್ತೋ ಸುಸ್ತು. ಮನೆ ಕೆಲಸದ ಒತ್ತಡದಲ್ಲಿ ನಿತ್ಯವೂ ಮಗನಿಗೆ ಬಟ್ಟೆ ತೊಡಿಸುವುದೆಂದರೆ ಪ್ರಯಾಸದ ಸಮಯ. ‘ಆ ಬಟ್ಟೆ ಬೇಡ, ಇದು ಬೇಡ, ಅದು ಹಳೇದಾಗಿದೆ, ಇದರಲ್ಲಿ ಗೊಂಬೆ ಇಲ್ಲ...’ ಹೀಗೆ ನಿತ್ಯವೂ ಏನಾದರೊಂದು ತರಲೆ ಮಾಡುವ ಮಗನ ಮನವೊಲಿಸಿ ಅಂಗಿ ಹಾಕುವುದೇ ದೊಡ್ಡ ಕೆಲಸ. ಇನ್ನು ಹೊರಗಡೆ ಪಾರ್ಟಿ, ಸಮಾರಂಭ ಎಂದು ಹೊರಟಾಗಲಂತೂ ಮಗನ ‘ಬಟ್ಟೆ ತರಲೆ’ ದುಪ್ಪಟ್ಟಾಗುತ್ತದೆ. ಅದೇ ಟೀಶರ್ಟ್ ಮೇಲೆ ಯಾವುದಾದರೂ ಗೊಂಬೆಯದ್ದೋ ಅಥವಾ ಪ್ರಾಣಿಯದ್ದೋ ಚಿತ್ತಾರ ಇದ್ದರೆ ಮಗನಿಗೆ ಅವುಗಳನ್ನು ತೋರಿಸಿ ಸುಲಭವಾಗಿ ಬಟ್ಟೆ ತೊಡಿಸಬಹುದು. ಹಾಗಾಗಿ ಆಕೆಯ ಆಯ್ಕೆ ಗೊಂಬೆ, ಪ್ರಾಣಿಗಳ ವಿನ್ಯಾಸದ ಬಟ್ಟೆಯೇ ಆಗಿರುತ್ತದೆ.

***

‘ಮಮ್ಮಿ ಈ ದೀಪಾವಳಿ ಹಬ್ಬಕ್ಕೆ ‘ಬಾರ್ಬಿ ಗರ್ಲ್’ ಇಲ್ಲ; ‘ಫ್ರೋಜನ್ ಎಲ್ಸಾ’ ಡ್ರೆಸ್ ಕೊಡಿಸು. ಇಲ್ಲಾ ಅಂದರೆ ಹಬ್ಬಕ್ಕೆ ಊರಿಗೆ ಬರೋದಿಲ್ಲ...’ ಎಂದು 5 ವರ್ಷದ ಮಗಳು ಗ್ರೀಷ್ಮಾ ಬೇಡಿಕೆ ಇಟ್ಟಾಗ ಸುಷ್ಮಾಳಿಗೆ ಅಚ್ಚರಿ. ಸದಾ ಕಾರ್ಟೂನ್ ನೋಡುವ ಗ್ರೀಷ್ಮಾಗೆ ಅದೇ ರೀತಿಯ ಡ್ರೆಸ್ ಹಾಕುವ ಉಮೇದು. ಕಳೆದ ವರ್ಷ ಕೊಡಿಸಿದ ಲೆಹೆಂಗಾ ಒಮ್ಮೆಯೂ ತೊಟ್ಟುಕೊಳ್ಳದೇ ಕಬೋರ್ಡ್ ಸೇರಿದೆ. ಮಗಳಿಗೆ ಇಷ್ಟವಿಲ್ಲದಿದ್ದರೂ ಆಕರ್ಷಕವಾಗಿದೆ ಎಂದು ಕೊಂಡುಕೊಂಡ ಸುಷ್ಮಾಗೆ ವ್ಯಥೆಪಡುವ ಸಮಯ.

***

ಇಪ್ಪತ್ತು, ಮೂವತ್ತು ದಶಕಗಳ ಹಿಂದೆ ಅಪ್ಪ ಹಬ್ಬದ ಸಮಯದಲ್ಲಿ ಬಟ್ಟೆ ತರುತ್ತಿದ್ದರು. ಅವರು ತಂದ ಬಟ್ಟೆ ಎಂಥದ್ದೇ ಇರಲಿ ಹಿರಿಹಿರಿ ಹಿಗ್ಗುತ್ತಾ ಹೊಸತೆನ್ನುವ ಖುಷಿಯಲ್ಲಿ ಮಕ್ಕಳು ತೊಟ್ಟುಕೊಳ್ಳುತ್ತಿದ್ದರು. ಆದರೆ, ಈಗ ಹಾಗಿಲ್ಲ. ಮಕ್ಕಳ ಎದುರಿಗೆ ವೈವಿಧ್ಯಮಯ ಆಯ್ಕೆಗಳಿವೆ. ಫ್ಯಾಷನಬಲ್ ಆಗಿ ಕಾಣಬೇಕು ಎಂದು ಚಿಕ್ಕ ಮಗುವೂ ಬಯಸುತ್ತದೆ. ಬಟ್ಟೆಗಳ ಮೇಲೆ ಗೊಂಬೆಗಳ ಅಥವಾ ಪ್ರಾಣಿಗಳ ಚಿತ್ರಗಳಿದ್ದರೆ ತಾಯಂದಿರಿಗೆ ಅರ್ಧ ತಲೆನೋವು ಕಡಿಮೆಯಾಗುತ್ತದೆ. ಆ ಚಿತ್ರಗಳನ್ನು ತೋರಿಸಿ ಅದಕ್ಕೊಂದು ಪುಟ್ಟ ಕಥೆ ಹೆಣೆಯುತ್ತಾ ಅಂಗಿ ತೊಡಿಸಬಹುದು. ಆಗ ಮಗುವೂ ಖುಷ್, ಅಮ್ಮನೂ ಖುಷ್.

‘ಇನ್ನೇನು ಹಬ್ಬಗಳ ಸಾಲು ಶುರುವಾಗಿದೆ. ಹಬ್ಬದ ಸಮಯದಲ್ಲಿ ಮಕ್ಕಳಿಗೆ ಟ್ರೆಂಡೀ ಬಟ್ಟೆಗಳನ್ನು ಕೊಳ್ಳುವ ಉಮೇದು ಪಾಲಕರದ್ದು. ಆದರೆ, ಮಕ್ಕಳ ಎಣಿಕೆಯೇ ಬೇರೆಯಾಗಿರುತ್ತದೆ. ಕೆಲ ಮಕ್ಕಳು ಗ್ರ್ಯಾಂಡ್ ಉಡುಪು ಇಷ್ಟಪಟ್ಟರೆ, ಇನ್ನು ಕೆಲವರು ಸಿಂಪಲ್ ಇರುವ, ಆದರೆ ಗೊಂಬೆ, ಪ್ರಾಣಿ, ಕಾರ್ಟೂನ್ ವಿನ್ಯಾಸದ ಬಟ್ಟೆಯನ್ನು ಇಷ್ಟಪಡುತ್ತಾರೆ. ಅವರ ಆಯ್ಕೆಯಂತೆ ಬಟ್ಟೆ ಕೊಳ್ಳದಿದ್ದರೆ ಅದು ಮೂಲೆ ಸೇರಬಹುದು. ವೈವಿಧ್ಯಮಯ ಪ್ರಾಣಿಗಳು, ಗೊಂಬೆಗಳು ಇದ್ದರೆ ಮಕ್ಕಳು ಹೆಚ್ಚು ಖುಷಿಯಿಂದ ಬಟ್ಟೆ ತೊಟ್ಟುಕೊಳ್ಳುತ್ತಾರೆ. ಅದರಲ್ಲೂ ತಮಗಿಷ್ಟದ ಕಾರ್ಟೂನ್ ಅಂಗಿ ಮೇಲೆ ಇದ್ದರಂತೂ ದಿನ ಪೂರ್ತಿ ಅದನ್ನು ನೋಡುತ್ತಾ ಬೀಗುತ್ತಾರೆ. ಇದು ಮಕ್ಕಳ ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತದೆ. ಹಾಗಾಗಿ ಮಕ್ಕಳು ಇಷ್ಟಪಡುವ ಬಟ್ಟೆಯ ಆಯ್ಕೆ ನಿಮ್ಮದಾಗಿರಲಿ’ ಎನ್ನುವ ಸಲಹೆ ಮಕ್ಕಳ ವಸ್ತ್ರ ವಿನ್ಯಾಸಕ ದಾವಣಗೆರೆಯ ಸುನಿಲ್ ಬಾಟಿ ಅವರದ್ದು.

## ಗೊಂಬೆಗಳ ಕಾರುಬಾರು

ಮಕ್ಕಳು, ಪೋಷಕರ ಬೇಡಿಕೆಗೆ ತಕ್ಕಂತೆ